# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂಖ್ಯೆ 201 (ಹಳೆ ವಾರ್ಡ್ 166) ಉಮಾಮಹೇಶ್ವರ ವಾರ್ಡ್ ಕಛೇರಿ ಬೆಂಗಳೂರು

**ದಿನಾಂಕ: 17.12.2022 ರಂದು ಬೆಳಗ್ಗೆ 11:00 ಗಂಟೆಗೆ ವಾರ್ಡ್ ಸಂಖ್ಯೆ 201 (ಹಳೆ ವಾರ್ಡ್ 166) ಉಮಾಮಹೇಶ್ವರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.**

### ಹಾಜರಿದ್ದ ಅಧಿಕಾರಿಗಳು:-

1. ಶ್ರೀ. ಪ್ರದೀಪ್ ರಾಥೋಡ್ – ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿಗಳು.
2. ಶ್ರೀ. ಪ್ರಕಾಶ್. ಎನ್. ಎಸ್ – ಸಹಾಯಕ ಅಭಿಯಂತರರು
3. ಶ್ರೀ. ನವೀನ್ ಕುಮ್ಹಾರ್. ಎಸ್ – ಸಹಾಯಕ ಅಭಿಯಂತರರು ಮತ್ತು ಸಂಚಾಲಕರು (ಕಿಯೋನಿಕ್ಸ್)
4. ಶ್ರೀ. ಕಲ್ಯಾಣ್ – ಕಿ.ಆ.ಪ (ಹೊರಗುತ್ತಿಗೆ ಆಧಾರದ ಮೇಲೆ)
5. ಶ್ರೀ. ದಿನೇಶ್ – ಕಂದಾಯ ಪರಿವೀಕ್ಷಕರು
6. ಘನತ್ಯಾಜ್ಯ ವಿಲೇವಾರಿ ಸೂಪರ್‌ವೈಸರ್‌ಗಳು.
7. 7ನೇ ಬ್ಲಾಕ್ ಜಯನಗರ ಮತ್ತು ಬನಶಂಕರಿ 2ನೇ ಹಂತದ ನಿವಾಸಿಗಳ ಸಂಘ ಸಂಸ್ಥೆಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು.

*********

ಮೇಲೆ ಹಾಜರಿದ್ದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರ ಸಮ್ಮುಖದಲ್ಲಿ ವಾರ್ಡ್ ಸಂಖ್ಯೆ 201 (ಹಳೆ ವಾರ್ಡ್ 166) ಉಮಾಮಹೇಶ್ವರ ವಾರ್ಡ್‌ನ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ, ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಈ ಹಿಂದಿನ ಸಭೆಯಲ್ಲಿ ಕಾರ್ಯಗತಗೊಳ್ಳದ ಕೆಲಸಕಾರ್ಯಗಳನ್ನು ಅಧಿಕಾರಿಗಳು ನಿಗಧಿತ ಅವಧಿಯೊಳಗೆ ಕಡ್ಡಾಯವಾಗಿ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿ ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಗಂಭೀರವಾಗಿ ಪರಿಗಣಿಸುವಂತೆ ಸೂಚಿಸಲಾಯತು.

ಮುಂದುವರೆದು, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ವಾರ್ಡ್ ಕಛೇರಿ ಸುತ್ತಮುತ್ತ ಪಾದಚಾರಿ ಮಾರ್ಗಗಳ ಮೇಲೆ ಓಡಾಡಲು ಕಷ್ಟಕರವಾಗಿರುತ್ತದೆ. ಆದ್ದರಿಂದ ಪಾದಚಾರಿ ಮಾರ್ಗಗಳ ಒತ್ತುವರಿಗಳನ್ನು ತೆರವುಗೊಳಿಸಬೇಕೆಂದು ಸಾರ್ವಜನಿಕರು ಕೋರಿದರು.

**ಕ್ರಮ: ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್‌ಎಸ್‌ಬಿ**

- ಬೆಂಗಳೂರು ಇಂಟರ್‌ನ್ಯಾಷನಲ್ ಶಾಲೆ ಹತ್ತಿರ ಹಾಗೂ ರಜತಾದ್ರಿ ಹೋಟೆಲ್ ಮುಂಭಾಗ ತೀವ್ರ ವಾಹನ ಸಂಚಾರದಿಂದ ಟ್ರಾಫಿಕ್ ಜಾಮ್ ಉಂಟಾಗುತ್ತಿರುತ್ತದೆ. ಆದ್ದರಿಂದ ಸದರಿ ಸ್ಥಳಗಳಲ್ಲಿ ವಾಹನ ಸಂಚಾರವನ್ನು ನಿಯಂತ್ರಿಸಲು ಸಾರ್ವಜನಿಕರು ಕೋರಿದರು.

**ಕ್ರಮ: ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಟ್ರಾಫಿಕ್ ಪೋಲೀಸ್**

ಪು.ತಿ.ನೋ

- ವಾರ್ಡ್ ವ್ಯಾಪ್ತಿಯಲ್ಲಿ ಜಲಮಂಡಳಿ ಮತ್ತು ಒಳಚರಂಡಿ ವಿಭಾಗ ರವರಿಂದ ಕಾಮಗಾರಿ ನಡೆಯುತ್ತಿದ್ದು ಸಾರ್ವಜನಿಕರ ಸಂಚಾರಕ್ಕೆ ತುಂಬಾ ಕಷ್ಟಕರವಾಗಿರುತ್ತದೆ. ಸದರಿ ಕಾಮಗಾರಿಯನ್ನು ಆದಷ್ಟು ವೇಗವಾಗಿ ಮುಗಿಸಿಕೊಡೊಲು ಸಾರ್ವಜನಿಕರು ಕೋರಿದರು.

**ಕ್ರಮ: ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್ಬಿ**

- ವಾರ್ಡ್ ವ್ಯಾಪ್ತಿಯ ಸುತ್ತಾಮುತ್ತಾ ಇರುವ ಬೀದಿ ದೀಪಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿರುವುದಿಲ್ಲ. ಸದರಿ ಎಲ್ಲಾ ಬೀದಿ ದೀಪಗಳನ್ನು ಸರಿಪಡಿಸಬೇಕೆಂದು ಸಾರ್ವಜನಿಕರು ಕೋರಿದರು.

**ಕ್ರಮ: ವಿದ್ಯುತ್-ಯೋಜನೆ, ದಕ್ಷಿಣ**

- ವಾರ್ಡ್ ವ್ಯಾಪ್ತಿಯ ಸುತ್ತಾಮುತ್ತಾ ಇರುವ ಬೀದಿ ದೀಪಗಳಿಗೆ ಅಡ್ಡ ಇರುವ ಮರದ ಕೊಂಬೆಗಳನ್ನು ತೆರವು ಮಾಡಬೇಕೆಂದು ಸಾರ್ವಜನಿಕರು ಕೋರಿದರು.

**ಕ್ರಮ: ಅರಣ್ಯಾಧಿಕಾರಿಗಳು.**

- ವಾರ್ಡ್ ವ್ಯಾಪ್ತಿಯಲ್ಲಿ ಮಳೆಯಿಂದಾಗಿ ಉಂಟಾಗುತ್ತಿರುವ ರಸ್ತೆಗುಂಡಿಗಳನ್ನು ಆಗಿಂದಾಗ್ಗೆ ಮುಚ್ಚಲಾಗುತ್ತಿರುತ್ತದೆ ಎಂದು ಸಹಾಯಕ ಅಭಿಯಂತರರು ತಿಳಿಸಿದರು.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳಾದ ಶ್ರೀ. ಪ್ರದೀಪ್ ರಾಥೋಡ್ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನೋಡೆಲ್ ಅಧಿಕಾರಿ
ವಾರ್ಡ್ ಸಂಖ್ಯೆ 201